ವಿದ್ಯುತ್ ಬಾಕಿ ಹಣವನ್ನು ಭೂಕಂದಾಯ ಬಾಕಿ ಹಣವೆಂದು ಪರಿಗಣಿಸಿ ಕೆಇಬಿ (ರೆಕವರಿ ಆಫ್ ಡ್ಯೂಸ್) ಆಕ್ಟ್ 1976 ಮತ್ತು ಕೆಇಬಿ (ರೆಕವರಿ ಆಫ್ ಡ್ಯೂಸ್) ರೂಲ್ಸ್ 1978 ಇವುಗಳ ಪ್ರಕಾರ ಬಾಕಿ ವಸೂಲಾತಿಗಾಗಿ ಕ್ರಮವನ್ನು ಸಹಾ ತೆಗೆದುಕೊಳ್ಳಲಾಗುತ್ತಿದೆ.

ಪಂಪುಸೆಟ್‌ಗಳಿಗೆ ಕೆಪ್ಯಾಸಿಟರ್ ಅಳವಡಿಕೆ

685 * ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿದ್ಯುತ್ ಯಂತ್ರಗಳಿಗೆ ಕೆಪಾಸಿಟರ್ ಅಳವಡಿಕೆಯನ್ನು ಕಡ್ಡಾಯಗೊಳಿಸುವುದಕ್ಕೆ ಕಾರಣಗಳೇನು?*

ಆ) *ಇದರಿಂದ ಆಗುವ ರೈತರ ತೊಂದರೆಗಳೇನು?*

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ನೀರಾವರಿ ಪಂಪುಸೆಟ್ಟು ಹಾಗೂ ಇತರ ಯಂತ್ರಚಾಲಿತ (ಮೋಟಿವ್ ಪವರ್) ಸ್ಥಾವರಗಳಿಗೆ ಕೆಪಾಸಿಟರ್‌ಗಳ ಅಳವಡಿಕೆಯನ್ನು ಕಡ್ಡಾಯಗೊಳಿಸಿರುವುದಕ್ಕೆ ಮುಖ್ಯ ಕಾರಣಗಳು ಕೆಳಕಂಡಂತಿವೆ.

ಅ) ವೋಲ್ಟೇಜ್ ಪರಿಸ್ಥಿತಿ ಹಾಗೂ ಪವರ್ ಫ್ಯಾಕ್ಟರ್‌ಗಳು ಸುಧಾರಣೆಗೊಳ್ಳುತ್ತವೆ.

ಆ) ನೀರಾವರಿ ಪಂಪುಸೆಟ್ಟು ಹಾಗೂ ಮೋಟಾರಗಳು ಕಾರ್ಯಕ್ಷಮತೆ ಉತ್ತಮಗೊಳ್ಳುತ್ತವೆ.

ಇ) ಕೆಪಾಸಿಟರ್‌ಗಳ ಅಳವಡಿಕೆಯಿಂದ ವಿದ್ಯುತ್ ನಷ್ಟವು ಕಡಿಮೆಯಾಗುತ್ತದೆ ಮತ್ತು ಹೆಚ್ಚಿನ ವಿದ್ಯುತ್ ಉಪಯೋಗಕ್ಕೆ ಲಭ್ಯವಾಗುತ್ತದೆ.

ಈ) ವಿದ್ಯುತ್ ಜಾಲದಲ್ಲಿ ರಿಯಾಕ್ಟೀವ್ ಲೋಡ್ ಕಡಿಮೆಗೊಳ್ಳುವುದರಿಂದ ವಿದ್ಯುತ್ ವ್ಯವಸ್ಥೆಯಲ್ಲಿನ ಸ್ಥಿರತೆ ಹೆಚ್ಚುತ್ತದೆ.

ಆ) ಕೆಪ್ಯಾಸಿಟರ್‌ಗಳ ಅಳವಡಿಕೆಯು ರೈತರಿಗೆ ಅನುಕೂಲವನ್ನು ಉಂಟುಮಾಡುವುದರಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಚಿತ್ರದುರ್ಗ ಜಿಲ್ಲೆಯಲ್ಲಿರುವ ಮಾನ್ಯತೆ ಪಡೆದ ಕ್ಲಬ್ಬುಗಳು

688 * ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿತ್ರದುರ್ಗ ಜಿಲ್ಲೆಯಲ್ಲಿ ಮಾನ್ಯತೆ ಪಡೆದ ಅಧಿಕಾರಿಗಳ ಹಾಗೂ ಅಧಿಕಾರೇತರ ಕ್ಲಬ್ಬುಗಳ ಸಂಖ್ಯೆ ಎಷ್ಟಿದೆ?*

ಆ) *ಇಂತಹ ಕ್ಲಬ್ಬುಗಳಿಗೆ ಪರವಾನಗಿ ನೀಡಲು ಅನುಸರಿಸುವ ನಿಯಮಗಳೇನು?*

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) 1) 29 ಅಧಿಕಾರಿಗಳ ಕ್ಲಬ್ಬುಗಳು

2) 97 ಅಧಿಕಾರೇತರ ಕ್ಲಬ್ಬುಗಳು

ಆ) ಈ ಕ್ಲಬ್ಬುಗಳನ್ನು ನಡೆಸಲು ಚಿತ್ರದುರ್ಗ ಜಿಲ್ಲಾ ದಂಡಾಧಿಕಾರಿಗಳು ಯಾರ ಪರವಾನಗಿಯನ್ನು ನೀಡಿರುವುದಿಲ್ಲ. ಆದರೆ, ಈ ಕ್ಲಬ್ಬುಗಳು ಕರ್ನಾಟಕ ರಿಜಿಸ್ಟ್ರೇಷನ್ ರೂಲ್ಸ್ 1960ರ ಕೆಳಗಡೆ ನೊಂದಾಯಿಸಲ್ಪಟ್ಟಿವೆ.

1996ರಲ್ಲಿ ಸಂಭವಿಸಿದ ಪೋಲೀಸ್ ಲಾಕಪ್ ಸಾವುಗಳು.

694 - ಶ್ರೀ ಎಸ್. ಸುರೇಶಕುಮಾರ್(ರಾಜಾಜಿನಗರ) : ಮಾನ್ಯ ಗೃಹ ಮತ್ತು ವಕ್ಫ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996 ಜನವರಿಯಿಂದ ಡಿಸೆಂಬರ್ 31ರವರೆಗೆ ಕರ್ನಾಟಕ ರಾಜ್ಯದಲ್ಲಿ ಎಷ್ಟು ಪೊಲೀಸ್ ಲಾಕಪ್ ಸಾವುಗಳು ಸಂಭವಿಸಿವೆ;

ಆ) ಈ ಲಾಕಪ್ ಸಾವಿಗೆ ಸಂಬಂಧಿಸಿದ ಮೇಲಿನ ಅಧಿಕಾರಿಗಳ ಹೆಸರುಗಳನ್ನು ತಿಳಿಸುವುದು;

ಇ) ಈ ರೀತಿ ಮೇಲಿನ ಲಾಕಪ್ ಸಾವಿಗೆ ಕಾರಣರಾದ ಎಷ್ಟು ಅಧಿಕಾರಿಗಳನ್ನು ಸರ್ಕಾರವು ಅಮಾನತ್ತಿನಲ್ಲಿರಿಸಿದ? ವಿವರ ತಿಳಿಸುವುದು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಐದು

ಆ) *1) ಬಸವನಬಾಗೇವಾಡಿ ಪೊಲೀಸ್‌ಠಾಣೆ ಅಪರಾಧ ಸಂಖ್ಯೆ : 139:96 :96 ಕಲಂ 341, 331, 384 465(ಎ) 302, 120 ಬಿ. ಬಾ. ದಂ. ಸ.*

1. ಶ್ರೀ ಎಸ್.ಬಿ. ಕಟ್ಟಿಮನಿ, ಸಿ.ಪಿ.ಐ. ಬಸವನಬಾಗೇವಾಡಿ ಸರ್ಕಲ್
2. ಶ್ರೀ ಆರ್. ಎಸ್. ಬೆಂಟೂರ್, ಪಿ.ಎಸ್.ಐ. ಬಾಗೇವಾಡಿ ಪೋಲೀಸ್ ಠಾಣೆ (ಕಾ ಮತ್ತು ಸು).
3. ಶ್ರೀ ಎನ್. ಹೆಚ್. ಗೌಡರ, ಎ.ಎಸ್.ಐ. ಬಸವನಬಾಗೇವಾಡಿ ಪೋಲೀಸ್‌ಠಾಣೆ.
4. ಸಿಪಿಸಿ 1829 ಬಿ.ಜಿ.ತೋಲಮಟ್ಟಿ ಬಸವನಬಾಗೇವಾಡಿ ಪೋಲೀಸ್ ಠಾಣೆ.
5. ಸಿಪಿಸಿ 1907 ವಿ.ಆರ್. ಕಟಕರ್, ಬಸವನಬಾಗೇವಾಡಿ ಪೋಲೀಸ್‌ಠಾಣೆ.